ಕೋಲಾರ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 11ನೇ ಆಗಸ್ಟ್ 1896.

ಸ್ಯ 1896—97ನೇ ಸಾಲಿಗೆ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಇರುವ ಡಿಸ್ಟ್ರಿಕ್ಟು ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿಯೂ ಮತ್ತು ಪ್ಲಾಂಟೇಷನ್‌ಗಳಲ್ಲಿಯೂ ದೊರಿಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆಜಿನಸುಗಳನ್ನು ಜಮಾಯಿಸಿಕೊಳ್ಳುವ ಹಕ್ಕು ದಾರಿಯು ಈ ಕೆಳಗೆ ಕಂಡ ತೆಖ್ತೆಯಲ್ಲಿ ನಮೂದುಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಸ್ಥಳಗಳಲ್ಲಿಯೂ ಮತ್ತು ಆಫೀಸರವರಿಂದಲೂ ತಾಲ್ಲೂಕುವಾರುಗಿಬಾಗಲಿ ಅಥವಾ ಹೋಬಳೀವಾರುಗಿಯಾಗಲಿ ಅಥವಾ ಮತ್ತಾವುದೆ ರೀತಿಯಾಗಿಯಾಗಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಹರಾಜು ಪ್ರತಿದಿವಸದಲ್ಲಿಯೂ 12 ಘಂಟೆ ಲಾಗಾಯತು ನಡಿಸಲ್ಪಡುವದು.

ನಂಬರು.	ತಾಲ್ಲೂಕಿನ ಹೆಸರು.	ಸ್ಥಳ.	ಹರಾಜ್ ತಾರೀಖು.	ಹರಾಜ್ ಸ್ಥಳ.	ಹರಾಜ್ ಮಾಡುವ ಆಫೀಸರವರು.
1	ಕೋಲಾರ	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು .. ಗಾಜಲ್‌ದಿನ್ನೆ ಪ್ಲಾಂಟೇಷನ್ .. ಸಂಗೊಂಡಹಳ್ಳಿ ಡಿಟೋ .. ಬಯ್ಯಪ್ಪನಹಳ್ಳಿ ಡಿಟೋ ..	14ನೇ ಸೆಪ್ಟಂಬರ್ 1896ನೇ ಇಸವಿ	ಕೋಲಾರ ತಾಲ್ಲೂಕು ಕಛೇರಿ	ಕೋಲಾರ ತಾಲ್ಲೂಕು ಅಮಲ್‌ದಾರು, ಫಾರೆಸ್ಟು ರೇಂಜರು, ಮಾಲೂರು ಅಮಲ್‌ದಾರು, ಸಹ.
2	ಬಾರಂಬೇಟೆ	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು ಕಾಮಸಮುದ್ರ ಸ್ಟೇಟ್‌ಫಾರೆಸ್ಟು ಮತ್ತು ಇದರಲ್ಲಿರತಕ್ಕ ಪ್ಲಾಂಟೇಷನ್‌ಗಳು .. ಕಾರಬೆಲೆ ಪ್ಲಾಂಟೇಷನ್ ..	16ನೇ ಸೆಪ್ಟಂಬರ್ 1896ನೇ ಇಸವಿ	ಬಾರಂಬೇಟೆ ತಾಲ್ಲೂಕು ಕಛೇರಿ	ಬಾರಂಬೇಟೆ ತಾಲ್ಲೂಕು ಅಮಲ್‌ದಾರು, ಫಾರೆಸ್ಟು ರೇಂಜರು, ಮಾಲೂರು ಅಮಲ್‌ದಾರು, ಸಹ.
3	ಮಾಲೂರು	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು .. ತಾಲ್ಲೂಕು ಕಛೇರಿ ಕಾಂಪೌಂಡಿನಲ್ಲಿರುವ ಪ್ಲಾಂಟೇಷನ್ .. ಜಳ್ಳಿವಿ ಪ್ಲಾಂಟೇಷನ್ ದಿನ್ನೇರಿ ಡಿಟೋ .. ಕಾಡುವುಮುತ್ಸಂದ್ರ ಡಿಟೋ .. ಹಳೆಕುರಂಡಹಳ್ಳಿ ಡಿಟೋ .. ಹೊಸಕುರಂಡಹಳ್ಳಿ ಡಿಟೋ .. ನುಲ್ಲಪ್ಪನಹಳ್ಳಿ ಡಿಟೋ .. ಮೂರಸಂದ್ರ ಡಿಟೋ .. ರಾಮಚಂದ್ರಪುರ ಡಿಟೋ .. ಎಸವಂತಪುರ ಡಿಟೋ .. ಲಕ್ಷ್ಮೀಸಾಗರ ಡಿಟೋ .. ವಕ್ಕಲೇರಿ ಡಿಟೋ ..	19ನೇ ಸೆಪ್ಟಂಬರ್ 1896ನೇ ಇಸವಿ	ಮಾಲೂರು ತಾಲ್ಲೂಕು ಕಛೇರಿ	ಮಾಲೂರು ತಾಲ್ಲೂಕು ಅಮಲ್‌ದಾರು, ಫಾರೆಸ್ಟು ರೇಂಜರು, ಮಾಲೂರು ಅಮಲ್‌ದಾರು, ಸಹ.
4	ಮುಳಬಾಗಲು	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು .. ಆಗರಸ್ಟೇಟ್ ಫಾರೆಸ್ಟು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು .. ಕಾಸೀಪುರ ಪ್ಲಾಂಟೇಷನ್‌ಗಳು ..	23ನೇ ಸೆಪ್ಟಂಬರ್ 1896ನೇ ಇಸವಿ	ಮುಳಬಾಗಲು ತಾಲ್ಲೂಕು ಕಛೇರಿ	ಮುಳಬಾಗಲು ತಾ|| ಅಮಲ್‌ದಾರು, ಫಾರೆಸ್ಟು ರೇಂಜರು, ಶ್ರೀನಿವಾಸಪುರ ಅಮಲ್‌ದಾರು, ಸಹ.
5	ಶ್ರೀನಿವಾಸಪುರ ಸಬ್ ತಾಲ್ಲೂಕು	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು .. ಶ್ರೀನಿವಾಸಪುರ ಫಾರೆಸ್ಟು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು .. ರಾಯಲ್‌ಪಾಡು ಫಾರೆಸ್ಟು ಡಿಟೋ ..	25ನೇ ಸೆಪ್ಟಂಬರ್ 1896ನೇ ಇಸವಿ	ಶ್ರೀನಿವಾಸಪುರ ತಾಲ್ಲೂಕು ಕಛೇರಿ	ಶ್ರೀನಿವಾಸಪುರ ಡೆಪ್ಯೂಟಿ ಅಮಲ್‌ದಾರು, ಫಾರೆಸ್ಟು ರೇಂಜರು, ಶ್ರೀನಿವಾಸಪುರ ಅಮಲ್‌ದಾರು, ಸಹ.

ನಂಬರು.	ತಾಲ್ಲೂಕಿನ ಹೆಸರು.	ಸ್ಥಳ.	ಹರಾಜ್ ತಾರೀಖು.	ಹರಾಜ್ ಸ್ಥಳ.	ಹರಾಜ್ ಮಾಡುವ ಆಫೀಸರವರು.
6	ಚಿಂತಾಮಣಿ ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು .. ಕೋನಪಲ್ಲಿ ಪ್ಲಾಂಟೇಷನ್ .. ಅಡ್ಡಗಲ್ ನೆಲವಂಕಿ ಸ್ಟೇಟ್‌ಫಾರೆಸ್ಟ್ ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು.	28ನೇ ಸೆಪ್ಟೆಂಬರ್ 1896ನೇ ಇಸವಿ	ಚಿಂತಾಮಣಿ ತಾಲ್ಲೂಕು ಕಛೇರಿ	ಚಿಂತಾಮಣಿ ತಾಲ್ಲೂಕು ಅಮಲ್ದಾರ್ರು. ಫಾರೆಸ್ಟ್ ರೇಂಜರು, ಶ್ರೀನಿವಾಸಪುರ ಅಮಲ್ದಾರ್ರು ಸಹ.
7	ಶಿಡ್ಲಘಟ್ಟ ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು .. ಪಟ್ರಹಳ್ಳಿ ಪ್ಲಾಂಟೇಷನ್ .. ತಿರುಮಲಿಗಾನದಿನ್ನೆ ಡಿಟೋ .. ಚೌಡಸಂದ್ರ ಡಿಟೋ .. ಗೊರ್ರಮಡಗು ಡಿಟೋ .. ಜಂಗಂಕೋಟೆ ಡಿಟೋ .. ಚಿಕ್ಕಹಾರಡಿ ಡಿಟೋ .. ದೊಡ್ಡಹಾರಡಿ ಡಿಟೋ ..	30ನೇ ಸೆಪ್ಟೆಂಬರ್ ಮತ್ತು 1ನೇ ಅಕ್ಟೋಬರ್ 1896ನೇ ಇಸವಿ	ಶಿಡ್ಲಘಟ್ಟ ತಾಲ್ಲೂಕು ಕಛೇರಿ	ಶಿಡ್ಲಘಟ್ಟ ತಾಲ್ಲೂಕು ಅಮಲ್ದಾರ್ರು ಫಾರೆಸ್ಟ್ ರೇಂಜರು, ಚಿಕ್ಕಬಳ್ಳಾಪುರ ಅಮಲ್ದಾರ್ರು ಸಹ.
8	ಚಿಕ್ಕಬಳ್ಳಾಪುರ.	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು. .. ನುಲ್ಲಾಲಪ್ಪನದಿನ್ನೆ ಪ್ಲಾಂಟೇಷನ್ .. ನರಸಿಂಹದೇವರಬೆಟ್ಟ ಫಾರೆಸ್ಟ್ 2 ಮತ್ತು 3ನೇ ಬ್ಲಾಕುಗಳು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು .. ನಂದೀ ಸ್ಟೇಟ್‌ಫಾರೆಸ್ಟ್ ಡಿಟೋ .. ಕಾವಾಡಿಬೆಟ್ಟಹಳ್ಳಿ ಪ್ಲಾಂಟೇಷನ್ .. ಸಂಜೀವಗಿಡ ಕಾವಲ್ ಡಿಟೋ ..	5ನೇ ಅಕ್ಟೋಬರ್ 1896ನೇ ಇಸವಿ	ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿ	ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್ದಾರ್ರು. ಫಾರೆಸ್ಟ್ ರೇಂಜರು, ಚಿಕ್ಕಬಳ್ಳಾಪುರ ಅಮಲ್ದಾರ್ರು ಸಹ.
9	ಗೋರೀಬಿದನೂರು.	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು .. ನರಸಿಂಹದೇವರಬೆಟ್ಟ ಫಾರೆಸ್ಟ್ 4ನೇ ಬ್ಲಾಕು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು .. ವಲಸೆ ಫಾರೆಸ್ಟ್ ಡಿಟೋ ..	8ನೇ ಅಕ್ಟೋಬರ್ 1896ನೇ ಇಸವಿ	ಗೋರೀಬಿದನೂರು ತಾಲ್ಲೂಕು ಕಛೇರಿ	ಗೋರೀಬಿದನೂರು ತಾಲ್ಲೂಕು ಅಮಲ್ದಾರ್ರು ಫಾರೆಸ್ಟ್ ರೇಂಜರು, ಚಿಕ್ಕಬಳ್ಳಾಪುರ ಅಮಲ್ದಾರ್ರು ಸಹ.
10	ಗುಡಿಬಂಡೆ ಸಬ್ ತಾಲ್ಲೂಕು ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು .. ಬೀಕಗಾನಹಳ್ಳಿ ಪ್ಲಾಂಟೇಷನ್ .. ನರಸಿಂಹದೇವರಬೆಟ್ಟ ಫಾರೆಸ್ಟ್ 5ನೇ ಬ್ಲಾಕು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು ..	10ನೇ ಅಕ್ಟೋಬರ್ 1896ನೇ ಇಸವಿ	ಗುಡಿಬಂಡೆ ತಾಲ್ಲೂಕು ಕಛೇರಿ	ಗುಡಿಬಂಡೆ ಡಪ್ಯೂಟಿ ಅಮಲ್ದಾರ್ರು ಫಾರೆಸ್ಟ್ ರೇಂಜರು, ಬಾಗೇಪಲ್ಲಿ ಅಮಲ್ದಾರ್ರು ಸಹ.
	ಬಾಗೇಪಲ್ಲಿ ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು .. ಎಲ್ಲಂಪಲ್ಲಿ ಪ್ಲಾಂಟೇಷನ್ .. ಇಟ್ಟಿಕಲ್‌ದುರ್ಗ ಫಾರೆಸ್ಟ್ ..	13ನೇ ಅಕ್ಟೋಬರ್ 1896ನೇ ಇಸವಿ	ಬಾಗೇಪಲ್ಲಿ ತಾಲ್ಲೂಕು ಕಛೇರಿ	ಬಾಗೇಪಲ್ಲಿ ತಾಲ್ಲೂಕು ಅಮಲ್ದಾರ್ರು ಡಿಟೋ ಮತ್ತು ಫಾರೆಸ್ಟ್ ರೇಂಜರು, ಬಾಗೇಪಲ್ಲಿ ಅಮಲ್ದಾರ್ರು ಸಹ.

ಪಸಾರೆಜಿನೆಸಿಗಳ ವಿವರ.

1. ಜೇನು, 2. ಜೇನುಮೇಣ, 3. ಕಪಿಲಾರಂಗು, 4. ಗೇರುಪಪ್ಪು, 5. ಹುಣಸೇಹಣ್ಣು, 6. ಹೊಂಗೇಕಾಯಿ, 7. ಬ್ಯಾಲದ ಹಣ್ಣು, 8. ಕಲ್ಲುಹೂವು, 9. ಕಾಡುಹರಳು, 10. ಗೋಂದು, 11. ಮರಡಿಪಪ್ಪು, 12. ಶೀಗೇಕಾಯಿ, 13. ತಾರೇಕಾಯಿ, 14. ಪಪ್ಪಿಚಕ್ಕೆ, 15. ಅಳಲೇಕಾಯಿ. 16. ಶೀತಾಫಲ.

2. ಚಡದರಖಾಸ್ತುದಾರರು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆಯನ್ನು ಕೇವಣಿ ಕಟ್ಟುತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜುಮಾಡಲ್ಪಡುವದು. ಆದರೆ ಅದರಿಂದ ಉಂಟಾಗುವ ಆದಾಯದಲ್ಲಿ ಸದರೀಯವರಿಗೆ ಏನೂ ದೊರಿಯಲಾರದು. ಹರಾಜು ಮಂಜೂರಾದ ಸಂಗತಿಯನ್ನು ಚಡದಸವಾಲ್ದಾರ್ರಿಗೆ ತಿಳಿಸಿದ

121

ಒಂದು ವಾರದೊಳಗಾಗಿ ಬಾಕಿ ಮುಕ್ತಾಲು ಹಿಸ್ಸೆ ವೊಬಲಗನ್ನು ಸದರೀಯವರು ಪಾವತೀ ಮಾಡತಕ್ಕದ್ದು. ಅಪ್ಪಾರಲ್ಲೆ ಹಣ ಪಾವತಿ ಮಾಡಲು ತಪ್ಪಿದರೆ ದರಖಾಸ್ತುದಾರು ವೊದಲು ಪಾವತಿ ಮಾಡಿದ ಕಾಲು ಹಿಸ್ಸೇ ಶೇವಣಿ ವೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ತಪ್ಪಿಸಲಾದೀತು. ಪೂರಾ ವೊಬಲಗು ಪಾವತಿಯಾದ ನಂತರ ಹರಾಜುಕಾಲದಲ್ಲಿ ಫಾಯಿಷ್ ಆಗುವ ಷರತ್ತುಗಳ ಕಂಡು ದರಖಾಸ್ತುದಾರರು ಕರಾರು ಬರಯು ಕೊಡಬೇಕಾಗಿಧೆ. ಇದಕ್ಕೆ ತಪ್ಪಿದರೆ ಜಿನಸಿಯನ್ನು ರೂಢಿಸಲು ಅಪ್ಪಣೆ ಕೊಡಲ್ಪಡಲಾರದು, ಪೂರಾ ಹರಾಜು ವೊಬಲಗಿನ ಮೇಲೆ ರೂಪಾಯಿಗೆ ಬಂದು ಆಣೆಯಂತೆ ಲೋಕಲ್ ಸೆಸ್ ಕೊಡತಕ್ಕದ್ದು.

3. ಹರಾಜು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಇಜಾರೇದಾರರು ಹಿಡುವಳಿ ಜಮೀನಿನಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಸಲನ್ನು ರೂಢಿಸಲು ಹಕ್ಕು ಇರುವದಿಲ್ಲ.

5. ಇನಾಂದಾರರ ಸ್ಥಿರಪಟ್ಟು ಹಕ್ಕುದಾರಿಗೆ ಇಜಾರೇದಾರು ಪ್ರವೇಶಿಸಕೂಡದು.

6. ಗ್ರಾಮ ಅಮರಾಯಿ ಫಲ ಹುಟ್ಟುವಳಿಯು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

7. ದರಖಾಸ್ತುದಾರರು ತಕ್ಕ ಸವಾಲ್ ಮಾಡದೆ ಹೋದರೆ ಹರಾಜು ಮಾಡುವ ಆಫೀಸರರು ಹರಾಜು ನಿಲ್ಲಿಸುವದಕ್ಕೂ ಅಥವಾ ಮುಂದೆ ಮತ್ತೊಂದು ವೇಳೆ ಹರಾಜು ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

ಬಿ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1896—97ನೇ ಇಸವಿ ಅರ್ಜೀ ನಂಬರ್ 29.

ಮೃತಪಟ್ಟ ಚನ್ನಂಕ್ಕೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಜವರೇಗವುಡರು, ಮೃತಪಟ್ಟ ಸದರೀ ಚನ್ನಂಕ್ಕೇಗವುಡರಿಗೆ ಮಗ ಆಗಬೇಕೆಂಬ ಹಕ್ಕುದಾರಿಮೇಲೆ ನಾಗಮಂಗಲದ ತಾಲ್ಲೂಕು ನೆಲ್ಲೀಗೆರೆ ಹೋಬಳಿ ಅಳಿಸಂದ್ರದ ಸ್ಥಳದ ಸದರೀ ಜವರೇಗವುಡರು, ಸದರೀ ವಾಸಸ್ಥರಾಗಿ ಮೃತಪಟ್ಟ ಚನ್ನಂಕ್ಕೇಗವುಡರ ಜಿಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜವರೇಗವುಡರ ಅರ್ಜಿಯನ್ನು ಸ್ಯ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಂಕ್ಕೇಗವುಡರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1896—97ನೇ ಇಸವಿ ಅರ್ಜೀ ನಂಬರ್ 33.

ಮೃತಪಟ್ಟ ಕಪ್ಪಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು 1ನೇ ಚಿಕ್ಕಮುಂಜಭಟ್ಟ 2ನೇ ವೆಂಕಟಪತಯ್ಯ 3ನೇ ನರಸುಬ್ಬಯ್ಯ ಇವರುಗಳು, ಮೃತಪಟ್ಟ ಸದರೀ ಕಪ್ಪಮ್ಮನವರಿಗೆ ಆಕ್ತನವುಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಅರಕಲಗೂಡು ತಾಲ್ಲೂಕು ಮರೂರ್ ಹೋಬಳಿ ಸರ್ವಮಾನ್ಯ ಹೆಬ್ಬಾಲೇ ಗ್ರಾಮದ ಸ್ಥಳದ ಸದರೀ 1—2—3ನೇ ಅರ್ಜೆದಾರರು, ಸದರೀ ವಾಸಸ್ಥರಾಗಿ ಮೃತಪಟ್ಟ ಕಪ್ಪಮ್ಮನವರ ಜಿಂದಗಿ ಬಗ್ಯಾಗಿ ಒರ ತಕ್ಕ 900 ರೂಪಾಯಿ ಸೂಲವನ್ನು ವಸೂಲ್ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕ ಮುಂಜಭಟ್ಟ ವಗೈರೇರ ಅರ್ಜಿಯನ್ನು ಸ್ಯ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಪ್ಪಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1896—97ನೇ ಇಸವಿ ಅರ್ಜೀ ನಂಬರ್ 43.

ಮೃತಪಟ್ಟ ಪಟೇಲ್ ಮರಿದೇವರಯಂಬವರ ಆಸ್ತೀವಿಷಯದಲ್ಲಿ—

ಅರ್ಜೀದಾರು 1ನೇ ಕಿವನಪ್ಪ 2ನೇ ನಂಜಯ್ಯ ಯಿವರುಗಳು, ಮೃತಪಟ್ಟ ಸದರೀ ಮರಿದೇವರುಯವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮುಳವಳ್ಳಿ ತಾಲ್ಲೂಕು ಅವ್ವೇರಹಳ್ಳಿದಾಖಲೆ ಚನ್ನಮಲ್ಲೇಗವುಡನ ಕೊಪ್ಪಲ್ ಸ್ಥಳದ ಸದರೀ ಕಿವನಪ್ಪ, ನಂಜಯ್ಯ ಇವರು, ಸದರೀ ವಾಸಸ್ಥರಾಗಿ ಮೃತಪಟ್ಟ ಮರದೇವರುಯವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಿವನಪ್ಪ ವಗೈರೇರ ಅರ್ಜಿಯನ್ನು ಸ್ಯ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರದೇವರುಯವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.